

بسم اللهِ الرّحمٰنِ الرّحيم

# ಮುಹಮ್ಮದ್ ಪೈಗಂಬರ(ಸ)ರ ಮೂಲಕವೇ ತೌಹೀದ್‌ನ ವಾಸ್ತವಿಕತೆ ಅರಿಯಲು ಸಾಧ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16-05-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ನಾನು ಕಳೆದ ವಾರದ ಖುತುಬದಲ್ಲಿ ಹೀಗೆ ವಿವರಿಸಿದ್ದೆ:– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ತಲ್ಲೀನರಾಗಿ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಮನವರಿಕೆ ಮಾಡಿಕೊಂಡರು. ಅಲ್ಲಾಹನ ಏಕತ್ವವನ್ನು ಮನವರಿಕೆ ಮಾಡಿಕೊಂಡರು. ಏಕೆಂದರೆ **ಏಕದೇವತ್ವದ (ತೌಹೀದ್)** ವಾಸ್ತವಿಕತೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾಧ್ಯಮದ ಮೂಲಕ ಹೊರತು ಅರ್ಥಮಾಡಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲ. ಅದೇ ರೀತಿ ಪವಿತ್ರ ಖುರ್‌ಆನಿನ ಜ್ಞಾನವನ್ನು ಸಹ. ಆದುದರಿಂದ **"ಲಾ ಇಲಾಹ ಇಲ್ಲಲ್ಲಾಹ್"** ಎಂಬುದರ ಜೊತೆಗೆ **"ಮುಹಮ್ಮದ್ ರಸೂಲುಲ್ಲಾಹ್"** ಎಂಬುದನ್ನು ಸಹ ಅರ್ಥಮಾಡಿಕೊಳ್ಳುವುದು ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೇ **'ಲಾ ಇಲಾಹ ಇಲ್ಲಲ್ಲಾಹ್'** ಎಂಬುದರ ವಾಸ್ತವಿಕ ಮತ್ತು ಕಾರ್ಯರೂಪದ ಉದಾಹರಣೆಯಾಗಿದ್ದಾರೆ. ಈ ದಿನ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಜವಾದ **ತೌಹೀದ್** (ಏಕದೇವ ವಿಶ್ವಾಸ) ಏನೆಂದು ವಿವರಿಸಿದ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುವೆನು. ಅದರಲ್ಲಿ ತೌಹೀದ್ ಎನ್ನುವುದರ ನಿಜಾರ್ಥವೇನು? ಯಾವ ರೀತಿಯ ಕೆಲಸಗಳನ್ನು ಮಾಡಿ ಒಬ್ಬ ಮನುಷ್ಯನು ನಿಜವಾದ **ಮುವಹ್ಹಿದ್ (ಏಕದೇವ ವಿಶ್ವಾಸಿ)** ಎಂದು ಕರೆಸಿಕೊಳ್ಳುವನು ಎನ್ನುವುದರ ಬಗ್ಗೆ ವಿವರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ **ಸೂರತುನ್ನಾಸ್** ವ್ಯಾಖ್ಯಾನ ಮಾಡುತ್ತಾ **'ಇಲಾಹಿನ್ನಾಸ್'** ಎಂಬ ವಚನದ ಬಗ್ಗೆ ಈರೀತಿ ವಿವರಣೆ ನೀಡುತ್ತಾರೆ. "ಈ ಸೂರತ್‌ನಲ್ಲಿ ಅಲ್ಲಾಹನು ತನ್ನನ್ನು **ರಬ್ಬಿನ್ನಾಸ್** ಎಂದು ಮೊದಲು ಹೇಳಿದನು. ಅನಂತರ **ಮಲಿಕಿನ್ನಾಸ್** ಎಂದು ಹೇಳಿದನು. ಕೊನೆಗೆ **ಇಲಾಹಿನ್ನಾಸ್** ಎಂದು ಹೇಳಿದನು. **ಇಲಾಹ್** ಎಂದರೆ ಮನುಷ್ಯನ ನಿಜವಾದ ಗುರಿಯೂ ಅವನು ಆಶಿಸುವಂತಹದೂ ಆಗಿದೆ. ಉದ್ದೇಶಿಸಲ್ಪಡುವವನು, ಆರಾಧಿಸಲ್ಪಡುವವನು ಮತ್ತು ಆಶಿಸಲ್ಪಡುವವನು **ಇಲಾಹ್** ಆಗಿದ್ದಾನೆ. ಆದುದರಿಂದ, **'ಲಾ ಇಲಾಹ ಇಲ್ಲಲ್ಲಾಹ್'** ಎಂದರೆ **ಲಾ ಮಅ್‌ಬೂದು ಲೀ ವಲಾ ಮಕ್‌ಸೂದು ಲೀ ವಲಾ ಮತ್‌ಲೂಬ್ ಲೀ ಇಲ್ಲಲ್ಲಾಹ್ –** ಅಲ್ಲಾಹನ ಹೊರತು ನನಗೆ ಬೇರೆ ಆರಾಧ್ಯನಿಲ್ಲ, ನನಗೆ ಬೇರೆ ಉದ್ದೇಶಲಕ್ಷ್ಯವಿಲ್ಲ, ನನಗೆ ಬೇರೆ ಆಶಿಸಲ್ಪಡುವಂತಹದೂ ಇಲ್ಲ.

ಇದೇ ನಿಜವಾದ ತೌಹೀದ್ (ಏಕದೇವ ವಿಶ್ವಾಸ) ಆಗಿದೆ. ಪ್ರತಿಯೊಂದು ಹೊಗಳಿಕೆಗೆ ಅರ್ಹನು ಅಲ್ಲಾಹನು ಮಾತ್ರ ಎಂದು ಭಾವಿಸಬೇಕು. ಎಷ್ಟು ಹೊಗಳಿಕೆಗಳಿದ್ದರೂ ಅವೆಲ್ಲವೂ ಅಲ್ಲಾಹನ ಕಡೆಗೆಯೇ ಮರಳಿ ಹೋಗುತ್ತವೆ ಮತ್ತು ಅಲ್ಲಾಹನಿಗೆಯೇ ಅವು ಅಲಂಕಾರ ನೀಡುತ್ತವೆ. ವಾಸ್ತವಿಕ ತೌಹೀದ್ ಇದೇ ಆಗಿದೆ.

ತೌಹೀದ್ (ಏಕದೇವ ವಿಶ್ವಾಸ) ಪೂರ್ಣವಾಗುವುದು ಎಲ್ಲಾ ಅಭಿಲಾಷೆಗಳನ್ನು ಈಡೇರಿಸುವವನು ಮತ್ತು ಎಲ್ಲಾ ರೋಗಗಳನ್ನು ಪರಿಹರಿಸಿಕೊಡುವವನು ಮತ್ತು ಎಲ್ಲಾ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಿಕೊಡುವವನು ಏಕ ದೇವನಾದ ಅಲ್ಲಾಹನೇ ಎಂದು ನಂಬುವುದರಿಂದಲೇ ಆಗಿದೆ. ಇದೇ **ಲಾ ಇಲಾಹ ಇಲ್ಲಲ್ಲಾಹ್** ಎನ್ನುವುದರ ಅರ್ಥವಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: "ಸೂಫಿ ಪಂಥದವರು **ಇಲಾಹ್** ಎಂಬ ಪದಕ್ಕೆ ಮಹ್‌ಬೂಬ್ (ಪ್ರಿಯಕರ), ಮಕ್‌ಸೂದ್ (ಉದ್ದೇಶಲಕ್ಷ್ಯ) ಮತ್ತು ಮಅ್‌ಬೂದ್(ಆರಾಧ್ಯ) ಎಂದು ಅರ್ಥ ಹೇಳಿದ್ದಾರೆ. ವಾಸ್ತವವೇನೆಂದರೆ, ಮನುಷ್ಯನು **ಲಾ ಇಲಾಹ ಇಲ್ಲಲ್ಲಾಹ್** ಎಂಬ ವಿಶ್ವಾಸ ಪ್ರಕಾರ ಸರಿಯಾದ ರೀತಿಯಲ್ಲಿ ಕಾರ್ಯವೆಸಗಿದರೆ ಮಾತ್ರ ಇಸ್ಲಾಮಿನ ಬಗ್ಗೆ ಪ್ರೀತಿ ಮತ್ತು ಗೌರವ ಸ್ಥಾಪಿಸಲ್ಪಡುವುದು."

ತೌಹೀದ್ (ಏಕದೇವ ವಿಶ್ವಾಸ) ಇದರ ಮಟ್ಟ ಒಬ್ಬ ಸತ್ಯ ವಿಶ್ವಾಸಿಯಲ್ಲಿ ಹೇಗಿರಬೇಕು ಎಂದು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಯಾರು ಸರಕಾರಿ ಅಧಿಕಾರಿಗಳ ಕಡೆಗೆ ಬಾಗಿರುತ್ತಾರೋ ಅವರಿಂದ ಬಹುಮಾನ ಅಥವಾ ಬಿರುದು ಪಡೆಯುತ್ತಾರೋ ಅಂತಹ ಜನರ ಹೃದಯಗಳಲ್ಲಿ ಸರಕಾರಿ ಅಧಿಕಾರಿಗಳ ಬಗ್ಗೆ ಇರುವ ಗೌರವ ದೇವನಿಗೆ ನೀಡಬೇಕಾದ ಗೌರವದ ಹಾಗಿರುತ್ತದೆ. ಇಂತಹ ಜನರು ಅವರ ಆರಾಧಕರಾಗುತ್ತಾರೆ. ಅವರ ಈ ವರ್ತನೆ ಅವರಲ್ಲಿ ತೌಹೀದನ್ನು (ಏಕದೇವ ವಿಶ್ವಾಸವನ್ನು) ಕೊನೆಗೊಳಿಸುತ್ತದೆ. ಅದು ಮನುಷ್ಯನನ್ನು ಅವನ ನಿಜವಾದ ಉದ್ದೇಶಲಕ್ಷ್ಯದಿಂದ ಎತ್ತಿ ದೂರಕ್ಕೆ ಎಸೆಯುತ್ತದೆ. ಆದುದರಿಂದ ಅಲ್ಲಾಹನ ಪ್ರವಾದಿಗಳು ಲೋಕಕ್ಕೆ ಆಗಮಿಸಿ ಏಕದೇವ ವಿಶ್ವಾಸ ಮತ್ತು ಕಾರ್ಯಕಾರಣಗಳ ಮಧ್ಯೆ ಇರುವ ಸಂಘರ್ಷವನ್ನು ನಿವಾರಿಸುವ ಉಪದೇಶಗಳನ್ನು ನೀಡುತ್ತಾರೆ. ಪ್ರತಿಯೊಂದು ಅದರದರ ಸ್ಥಾನದಲ್ಲಿರಬೇಕು. ಎಲ್ಲವೂ ಏಕದೇವ ವಿಶ್ವಾಸವನ್ನು ಆಶ್ರಯಿಸಿರಬೇಕು. ಪ್ರವಾದಿಗಳು ಜನರಿಗೆ ಉಪದೇಶ

ನೀಡಿರುವುದೇನೆಂದರೆ ಎಲ್ಲಾ ಗೌರವಗಳು, ಎಲ್ಲಾ ಸುಖ ಸೌಕರ್ಯಗಳು, ಎಲ್ಲಾ ಅಭಿಲಾಷೆಗಳ ಈಡೇರುವಿಕೆ ಅಲ್ಲಾಹನ ಮೂಲಕವೇ ಸಂಭವಿಸುತ್ತವೆ. ಅವನ ಎದುರಿಗೆ ಮತ್ತೊಂದನ್ನು ಸಹ ಸ್ಥಾಪಿಸುವುದಾದರೆ ಎರಡು ವಿರುದ್ಧ ಶಕ್ತಿಗಳ ಹೋರಾಟದಿಂದ ಒಂದು ನಾಶವಾಗುತ್ತದೆ. ಆದುದರಿಂದ ಅಲ್ಲಾಹನ ತೌಹೀದನ್ನು ಸ್ಥಾಪಿಸುವುದು ಆವಶ್ಯಕವಾಗಿದೆ. ನಾವು ಅಲ್ಲಾಹನು ಒದಗಿಸಿದ ಸಾಧನ ಸಾಮಾಗ್ರಿಗಳನ್ನು ಬಳಸಬಹುದಾಗಿದೆ. ಆದರೆ ಅವುಗಳಿಗೆ ದೇವನ ಸ್ಥಾನ ನೀಡಬಾರದು. ತೌಹೀದ್‌ಗೆ ಆದ್ಯತೆ ನೀಡಬೇಕು. ಲಾಭ, ನಷ್ಟಗಳು ಅಲ್ಲಾಹನ ಕೈಗಳಲ್ಲಿವೆ ಎಂದು ಮನವರಿಕೆ ಮಾಡಿಕೊಂಡರೆ ಈ ತೌಹೀದ್‌ನಿಂದ ಅಲ್ಲಾಹನ ಬಗ್ಗೆ ಪ್ರೀತಿ ಉಂಟಾಗುತ್ತದೆ. ವಾಸ್ತವಿಕವಾಗಿ ನಮಗೆ ಉಪಕಾರ ಮಾಡುವವನು ಅಲ್ಲಾಹನೇ ಆಗಿದ್ದಾನೆ. ಕಣಕಣಗಳು ಸಹ ದೊರಕುವುದು ಅವನಿಂದಲೇ ಆಗಿದೆ. ಬೇರೆ ಯಾರೂ ಮಧ್ಯದಲ್ಲಿ ಬರುವುದಿಲ್ಲ. ಮನುಷ್ಯನು ಇಂತಹ ಪರಿಶುದ್ಧ ಸ್ಥಿತಿಯನ್ನು ಗಳಿಸಿದರೆ ಅವನು **ಮುವಹ್ಹಿದ್** (ಏಕದೇವ ವಿಶ್ವಾಸಿ) ಎಂದು ಕರೆಯಲ್ಪಡುತ್ತಾನೆ. (ಇಂತಹ ಸ್ಥಿತಿಯನ್ನು ಮನುಷ್ಯನು ತಲಪುವಾಗ ಅವನು ಸಂಪೂರ್ಣವಾಗಿ ಅಲ್ಲಾಹನಲ್ಲಿ ಭರವಸೆ ಇಡುವವನಾಗುತ್ತಾನೆ. ಬೇರೆ ಯಾರೂ ಮಧ್ಯದಲ್ಲಿ ಬರುವುದಿಲ್ಲ). ತೌಹೀದ್‌ನ (ಏಕದೇವ ವಿಶ್ವಾಸದ) ಒಂದು ರೂಪವು ಕಲ್ಲುಗಳನ್ನೂ ಮನುಷ್ಯರನ್ನೂ ಬೇರೆ ವಸ್ತುಗಳನ್ನೂ ದೇವನೆಂದು ಗಣಿಸದಿರುವುದಾಗಿದೆ. ಅವುಗಳಿಗೆ ದೇವನ ಸ್ಥಾನ ನೀಡುವ ಬಗ್ಗೆ ಬೇಸರ ಮತ್ತು ದ್ವೇಷ ಪ್ರಕಟಿಸುವುದಾಗಿದೆ.

ತೌಹೀದ್‌ನ ಮತ್ತೊಂದು ರೂಪವು ಸಾಧನ ಸಾಮಾಗ್ರಿಗಳ ಮೇಲೆ ಪೂರ್ಣ ಭರವಸೆಯನ್ನು ಹೊಂದದಿರುವುದಾಗಿದೆ. (ಸಾಧನ ಸಾಮಾಗ್ರಿಗಳ ಮೇಲೆ ಪೂರ್ಣವಾಗಿ ಹೊಂದಿಕೊಂಡಿರಬಾರದು. ಅವುಗಳನ್ನು ಮಿತಿಮೀರಿ ಅವಲಂಬಿಸಿರಬಾರದು. ಅವುಗಳಿಂದ ಉದ್ದೇಶ ಈಡೇರುವುದು ಎಂದು ಭಾವಿಸಬಾರದು).

ತೌಹೀದ್‌ನ ಮೂರನೆಯ ರೂಪ ನಿಮ್ಮ ಸ್ವಂತ ಆಶಾಭಿಲಾಷೆಗಳನ್ನು ನಿಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಕೊನೆಗೊಳಿಸುವುದಾಗಿದೆ. ಕೆಲವು ಸಾರಿ ಮನುಷ್ಯನು ತನ್ನ ಸಾಮರ್ಥ್ಯಗಳನ್ನೂ ಶಕ್ತಿಗಳನ್ನೂ ತನ್ನ ಗಮನದಲ್ಲಿರಿಸಿಕೊಳ್ಳುತ್ತಾನೆ. ನಾನು ಇಂತಹ ಕೆಲಸ ನನ್ನ ಸ್ವಂತ ಶಕ್ತಿಯಿಂದ ಮಾಡಿದೆ ಎಂದು ಭಾವಿಸುತ್ತಾನೆ. ಮನುಷ್ಯನು ತನ್ನ ಶಕ್ತಿಯ ಬಗ್ಗೆ ಎಂತಹ ಭರವಸೆ ಹೊಂದಿರುತ್ತಾನೆಂದರೆ ಪ್ರತಿಯೊಂದು ಕೆಲಸವನ್ನು ತನ್ನ ಶಕ್ತಿಯ ಕಡೆಗೆ ಅನ್ವಯಿಸಿ ಹೇಳುತ್ತಾನೆ. ಆದರೆ ಮನುಷ್ಯನು ತನ್ನ ಶಕ್ತಿಯ ಬಗ್ಗೆ ನಿರಾಕರಿಸುವಾಗ ಮಾತ್ರ ಅವನು ವಾಸ್ತವಿಕ **ಮುವಹ್ಹಿದ್** (ಏಕದೇವ ವಿಶ್ವಾಸಿ) ಆಗುತ್ತಾನೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **'ಹೇಳು ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು.'**

ಆದುದರಿಂದ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವ ಮನುಷ್ಯನು ಅಲ್ಲಾಹನ ಪ್ರೀತಿಯನ್ನು ಗಳಿಸಿದವನ ಸ್ಥಾನಕ್ಕೆ ತಲಪುತ್ತಾನೆ. ಇದರಿಂದ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಪರಿಪೂರ್ಣ **ಏಕದೇವ ವಿಶ್ವಾಸಿ**(ಮುವಹ್ಹಿದ್)**ಯ** ಮಾದರಿ ಆಗಿದ್ದರು ಎಂದು. ಯಹೂದಿಗಳು ವಾಸ್ತವಿಕವಾಗಿ ಏಕದೇವ ವಿಶ್ವಾಸಿಗಳಾಗಿದ್ದರೆ ಇಂತಹ ಏಕದೇವ ವಿಶ್ವಾಸಿಯಿಂದ ದೂರ ಸರಿದು ಹೋಗುತ್ತಿರಲಿಲ್ಲ. (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅವರು ನಂಬಬೇಕಾಗಿತ್ತು). ಅಲ್ಲಾಹನು ನೇಮಿಸಿದ ಖಾತಮುರ್ರುಸುಲ್ (ಸಂದೇಶವಾಹಕರ ನೇತಾರ) ಆಗಿರುವವರನ್ನು ನಿರಾಕರಿಸಿ ಅವರೊಂದಿಗೆ ಹಗೆತನ ಹೊಂದುವುದು ಅತ್ಯಂತ ಅಪಾಯಕಾರಿ ಎಂದು ಅವರು ನೆನಪಿಡಬೇಕಾಗಿತ್ತು. ಆದರೆ ಅವರು ಅದರ ಬಗ್ಗೆ ಯಾವುದೇ ಗಮನ ನೀಡಲಿಲ್ಲ. ಯಹೂದಿಯರ ಧಾರ್ಮಿಕ ಗ್ರಂಥದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಗಮನದ ಬಗ್ಗೆ ಭವಿಷ್ಯವಾಣಿಗಳಿದ್ದರೂ ಅವರು ನಿರಾಕರಿಸಿದರು. ಇದಕ್ಕೆ ಕಾರಣ ಅವರ ಹೃದಯಗಳು ಕಠಿಣವಾದುವು (ಖಸತ್ ಖುಲೂಬುಹುಮ್) ಎಂದು ಅಲ್ಲಾಹನು ಹೇಳಿದ ಕಾರಣವಲ್ಲದೆ ಬೇರೇನಾಗಲು ಸಾಧ್ಯ?''

ಪ್ರವಾದಿ ಈಸಾ ಅಲೈಹಿಸ್ಸಲಾಮರ ಬಗ್ಗೆ ಹೊಂದಿದ್ದ ತಪ್ಪು ನಂಬಿಕೆಗಳ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೀಗೆ ಹೇಳುತ್ತಾರೆ:

''ಇಸ್ಲಾಮ್ ಎಂತಹ ಪರಿಶುದ್ಧವಾದ ತೌಹೀದ್ (ಏಕದೇವ ವಿಶ್ವಾಸ)ವನ್ನು ಪ್ರತಿಪಾದಿಸಿದೆ ಎಂದರೆ ಅನ್ಯ ಧರ್ಮಗಳಲ್ಲಿ ಅವರ ಒಂದಂಶ ಸಹ ಕಾಣಿಸುವುದಿಲ್ಲ. ಹಿಂದಿನ ಗ್ರಂಥಗಳಲ್ಲಿ ದೇವನ ಏಕತ್ವದ ಬಗ್ಗೆ ಹೇಳಿದ್ದರೂ ಎಲ್ಲಾ ಪ್ರವಾದಿಗಳ ಆಗಮನದ ಉದ್ದೇಶ ಏಕದೇವ ವಿಶ್ವಾಸದ ಪ್ರಚಾರವೇ ಆಗಿದ್ದರೂ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಯಾವ ರೀತಿಯಲ್ಲಿ ತೌಹೀದನ್ನು ತಂದರೋ ಯಾವ ರೀತಿ ಪವಿತ್ರ ಖುರ್‌ಆನ್ ತೌಹೀದ್‌ನ ಅಂತಸ್ತುಗಳನ್ನು ಸ್ಪಷ್ಟವಾಗಿ ವಿವರಿಸಿದೆಯೋ ಅಂತಹದನ್ನು ಯಾವುದೇ ಧಾರ್ಮಿಕ ಗ್ರಂಥದಲ್ಲಿ ಖಂಡಿತವಾಗಿಯೂ ಕಾಣಲು ಸಾಧ್ಯವಿಲ್ಲ. (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುವವರು ಪ್ರವಾದಿ ಈಸಾ ಅಲೈಹಿಸ್ಸಲಾಮ್ ಮೃತರಾದುದನ್ನು ಅಂಗೀಕರಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವರನ್ನು ಅಲ್ಲಾಹನ ಎದುರಿಗೆ ನಿಲ್ಲಿಸುತ್ತಾರೆ. ಹೀಗಿದ್ದರೂ ಅವರು ತಮ್ಮನ್ನು ಮುಸ್ಲಿಮರೆಂದು ಹೇಳಿಕೊಳ್ಳುತ್ತಾರೆ. ಇಂತಹ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ). ಇಂತಹ ಪರಿಶುದ್ಧ ನೀರಿನ ಕಾರಂಜಿಯನ್ನು ಅವರು ಕೊಳಕು ಮಾಡಲು ಉದ್ದೇಶಿಸಿದರೆ ಇಸ್ಲಾಮ್ ಹೀನೈಸಲ್ಪಡಲು ಇನ್ನೇನು ಬಾಕಿಯಿದೆ? ಅವರ ದುರದೃಷ್ಟವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಂದ ನಿಜವಾದ ಇಸ್ಲಾಮನ್ನು ಪವಿತ್ರ ಖುರ್‌ಆನ್‌ನೊಂದಿಗೆ ಸಾಬೀತುಗೊಳಿಸಿ ತೋರಿಸಿಕೊಟ್ಟರೆ ಮತ್ತು ಅವರ ನಂಬಿಕೆಗಳು ತಪ್ಪೆಂದು ಹೇಳಿದರೆ ಅವರು ನೀಡುವ ಉತ್ತರ: ನಮ್ಮ ತಂದೆ ತಾತಂದಿರು ಹೀಗೆಯೇ ನಂಬುತ್ತಿದ್ದರು ಎಂದಾಗಿದೆ. ಆದರೆ ನಾನು ಕೇಳುತ್ತೇನೆ– ನೀವು ಇಷ್ಟು ಮಾತ್ರ ಹೇಳಿ ನಿಮ್ಮನ್ನು ದೋಷಾರೋಪದಿಂದ ಮುಕ್ತರನ್ನಾಗಿ ಮಾಡಲು ಸಾಧ್ಯವಿದೆಯೇ?

ಖಂಡಿತವಾಗಿಯೂ ಇಲ್ಲ. ಪವಿತ್ರ ಖುರ್‌ಆನ್ ಹೇಳುವ ಹಾಗೆ ಮತ್ತು ಅಲ್ಲಾಹನ ಪುರಾತನ ನಡೆವಳಿಕೆ ಪ್ರಕಾರ ಅವರ ಮಾತುಗಳು ಅವರ ವಿರುದ್ಧವೇ ಸಾಕ್ಷ್ಯಾಧಾರವಾಗಿ ನಿಲ್ಲುವುದು. ಅಲ್ಲಾಹನ ಸಂದೇಶವಾಹಕರು ಬಂದಾಗಲೆಲ್ಲಾ ಅವರನ್ನು ವಿರೋಧಿಸಿದ ಶತ್ರುಗಳು ಹೀಗೆ ಹೇಳುತ್ತಿದ್ದರು.

**ಮಾ ಸಮಿಅ್‌ನಾ ಬಿಹಾಝಾ ಫೀ ಆಬಾಇನಲ್‌ಅವ್ವಲೀನ್ -** "ನಮ್ಮ ತಂದೆ ತಾತಂದಿರ ಕಾಲದಲ್ಲಿ ಇಂತಹ ಘಟನೆ ನಡೆದುದರ ಬಗ್ಗೆ ನಾವು ನೋಡಿಲ್ಲ ಅಥವಾ ಕೇಳಿಲ್ಲ."

ತೌಹೀದ್ (ಏಕದೇವ ವಿಶ್ವಾಸ) ಮತ್ತು **ಶಿರ್ಕ್ ಫಿಲ್ ಅಸ್‌ಬಾಬ್** (ಸಾಧನ ಸಾಮಗ್ರಿಗಳ ಬಹುದೇವಾರಾಧನೆ) ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ತೌಹೀದ್ ಎಂದರೆ ಕೇವಲ ನಾಲಗೆಯಿಂದ **ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್** ಎಂದು ಮಾತ್ರ ಹೇಳುವುದಲ್ಲ. ತೌಹೀದ್ ಎಂದರೆ ಅಲ್ಲಾಹನ ಬಗ್ಗೆ ಗೌರವ ಭಾವನೆಯನ್ನು ಹೃದಯದಲ್ಲಿ ಕುಳ್ಳಿರಿಸುವುದು, ಅದಕ್ಕೆ ಎದುರಾಗಿ ಬೇರೆ ಯಾವ ವಸ್ತುವಿಗೂ ಅಂತಹ ಗೌರವದ ಸ್ಥಾನವನ್ನು ಹೃದಯದಲ್ಲಿ ನೀಡದಿರುವುದಾಗಿದೆ. ಪ್ರತಿಯೊಂದು ಕೆಲಸ, ಶಕ್ತಿ ಮತ್ತು ಸಂತೃಪ್ತಿ ಇವುಗಳ ಮೂಲಸ್ಥಾನ ಅಲ್ಲಾಹನ ಪರಿಶುದ್ಧ ಅಸ್ತಿತ್ವವೆಂದು ಭಾವಿಸಬೇಕು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಅವನ ಮೇಲೆ ಮಾತ್ರ ಭರವಸೆಯನ್ನು ಇಡಬೇಕು. ಅಲ್ಲಾಹನ ಹೊರತು ಬೇರೆ ಯಾರ ಬಗ್ಗೆಯೂ ಭರವಸೆ ಖಂಡಿತವಾಗಿಯೂ ಹೊಂದಬಾರದು. ಅಲ್ಲಾಹನ ಬಗ್ಗೆ ಮತ್ತು ಅವನ ಗುಣ ವಿಶೇಷಗಳಿಗೆ ಸಂಬಂಧಿಸಿ ಯಾರನ್ನೂ ಸಹಭಾಗಿಗಳಾಗಿ ಕಲ್ಪಿಸಬಾರದು.

ಈಗ ಸೃಷ್ಟಿಗಳ ಪೂಜೆಯನ್ನು ಯಾರೂ ಅಷ್ಟೊಂದು ಅಂಗೀಕರಿಸುವುದಿಲ್ಲ. ಆದರೆ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದ ಶಿರ್ಕ್ (ಬಹುದೇವಾರಾಧನೆ) ಹೇಗಿದೆ ಎಂದರೆ ಬಹಳ ಜನರು ಅದನ್ನು ಮನವರಿಕೆ ಮಾಡಿಕೊಂಡಿಲ್ಲ. ಉದಾಹರಣೆಗೆ ಕೃಷಿಕನು ಹೇಳುತ್ತಾನೆ– ನಾನು ಕೃಷಿ ಮಾಡದೆ ಇದ್ದರೆ, ಅದರಲ್ಲಿ ಫಸಲು ಲಭಿಸದೆ ಇದ್ದರೆ ನನ್ನ ಜೀವನ ಸಾಗಲಾರದು ಎಂದು. ಇದೇರೀತಿ ಇತರ ಕೆಲಸಗಾರರೂ ತಮ್ಮ ಉದ್ಯೋಗದ ಮೇಲೆ ಭರವಸೆ ಇಡುತ್ತಾರೆ. ನಾವು ಉದ್ಯೋಗ ಮಾಡದಿದ್ದರೆ ಜೀವಿಸುವುದು ಅಸಾಧ್ಯ ಎಂದು ಅವರು ಭಾವಿಸುತ್ತಾರೆ. ಇದರ ಹೆಸರು 'ಅಸ್‌ಬಾಬ್ ಪರಸ್ತೀ' (ಸಾಧನ ಸಾಮಗ್ರಿಗಳ ಆರಾಧನೆ) ಎಂದಾಗಿದೆ. ಅವರಿಗೆ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ ನಂಬಿಕೆ ಇಲ್ಲ. ಕೆಲಸ, ಉದ್ಯೋಗಗಳ ಮಾತು ಹಾಗಿರಲಿ, ಜೀವನಕ್ಕೆ ಅನಿವಾರ್ಯವಾಗಿರುವ ನೀರು, ಗಾಳಿ ಮತ್ತು ಆಹಾರ ಸಹ ಅಲ್ಲಾಹನ ಅನುಮತಿ ದೊರಕದಿದ್ದರೆ ಮನುಷ್ಯನಿಗೆ ಪ್ರಯೋಜನಕರವಾಗಲಾರವು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಹೀಗಿದೆ.

**ಅಂತ ಮಿನ್ನೀ ವ ಅನ ಮಿನ್‌ಕ.** – "ನೀನು ನನ್ನಿಂದ ಮತ್ತು ನಾನು ನಿನ್ನಿಂದ"

ಈ ಇಲ್‌ಹಾಮ್ ಬಗ್ಗೆ ಇದು ತೌಹೀದ್‌ಗೆ ವಿರುದ್ಧವಾಗಿದೆ ಎಂದು ಆಕ್ಷೇಪ ಉಂಟಾಯಿತು.

ಇದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "**ಅಂತ ಮಿನ್ನೀ** (ನೀನು ನನ್ನಿಂದ) ಎಂಬುದು ಬಹಳ ಸ್ಪಷ್ಟವಿದೆ. ಇದರ ಬಗ್ಗೆ ಆಕ್ಷೇಪ ಮಾಡಲು ಸಾಧ್ಯವೇ ಇಲ್ಲ. ನಾನು ಅಲ್ಲಾಹನ ಅನುಗ್ರಹದಿಂದಲೇ ಆಗಮಿಸಿದೆನು, ನನಗೆ ದೊರೆತುದೆಲ್ಲವೂ ಅಲ್ಲಾಹನೇ ನೀಡಿದವುಗಳಾಗಿವೆ."

ನಂತರ **ಅನ ಮಿನ್‌ಕ** (ನಾನು ನಿನ್ನಿಂದ) ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಇಲ್‌ಹಾಮಿನ ಈ ಭಾಗದ ಕುರಿತು ಸತ್ಯಾಂಶಗಳನ್ನು ಅರಿತುಕೊಳ್ಳಲು ನೆನಪಿಡಬೇಕಾದುದೇನೆಂದರೆ, ಒಬ್ಬ ಮನುಷ್ಯನು ಅಸ್ತಿತ್ವರಾಹಿತ್ಯದ ಪರಿಪೂರ್ಣ ಸ್ಥಿತಿಗೆ ತಲಪಿ ಒಂದು ಹೊಸ ಜೀವಿತವನ್ನೂ ಪರಿಶುದ್ಧ ಜೀವನವನ್ನೂ ಗಳಿಸಿದಾಗ ಅಲ್ಲಾಹನು ಅವನನ್ನು ಸಂಬೋಧಿಸಿ ಹೇಳಿದನು '**ಅಂತ ಮಿನ್ನೀ**' (ನೀನು ನನ್ನಿಂದ) ಎಂದು. ಇದು ಆ ಮನುಷ್ಯನು ಅಲ್ಲಾಹನ ಸಾಮೀಪ್ಯ ಗಳಿಸಿದ ಬಗ್ಗೆ ಮತ್ತು ದೇವ ಜ್ಞಾನದ ವಾಸ್ತವಿಕತೆಯನ್ನು ಅರಿತ ಬಗ್ಗೆ ಸಾಕ್ಷ್ಯಾಧಾರವಾಗಿದೆ. ಆ ಮನುಷ್ಯನು ಅಲ್ಲಾಹನ ಏಕತ್ವ, ಅಲ್ಲಾಹನ ಗೌರವ ಮತ್ತು ಪ್ರತಾಪದ ಪ್ರಕಟಣೆ ಮಾಡುವವನಾಗುತ್ತಾನೆ. ಅವನು ಅಲ್ಲಾಹನ ಅಸ್ತಿತ್ವದ ಪ್ರತ್ಯಕ್ಷ ಮತ್ತು ಜೀವಂತ ಸಾಕ್ಷ್ಯವಾಗುತ್ತಾನೆ. ಈ ರೀತಿಯಲ್ಲಿ ಅಲ್ಲಾಹನು ಅವನಲ್ಲಿ ಪ್ರಕಟವಾಗುತ್ತಾನೆ. ಅವನು ಅಲ್ಲಾಹನ ಪ್ರಕಟಣೆಯ ಒಂದು ಕನ್ನಡಿ ಆಗುತ್ತಾನೆ. ಯಾರು ಅಲ್ಲಾಹನನ್ನು ದರ್ಶಿಸುವ ಒಂದು ಕನ್ನಡಿ ಆಗುತ್ತಾನೋ ಅವನ ಬಗ್ಗೆ ಅಲ್ಲಾಹನು ಹೇಳುತ್ತಾನೆ: **ಅನ ಮಿನ್‌ಕ** (ನಾನು ನಿನ್ನಿಂದ). ಯಾವ ಮನುಷ್ಯನಿಗೆ ಅನ ಮಿನ್‌ಕ (ನಾನು ನಿನ್ನಿಂದ) ಎಂಬ ಶಬ್ದ ಅಲ್ಲಾಹನು ಹೇಳುತ್ತಾನೋ ಆ ಮನುಷ್ಯನು ಎಂತಹ ಕಾಲದಲ್ಲಿ ಆಗಮಿಸುತ್ತಾನೆಂದರೆ ಆ ಕಾಲದಲ್ಲಿ ದೇವಾರಾಧನೆ ಪೂರ್ಣವಾಗಿ ಅಳಿಸಿ ಹೋಗಿರುತ್ತದೆ. ಈ ಕಾಲದಲ್ಲಿ ಸಹ ಲೋಕದಲ್ಲಿ ಪಾಪ ಕೃತ್ಯಗಳು ಬಹಳ ವರ್ಧಿಸಿವೆ. ದೇವನನ್ನು ಗುರುತಿಸುವ ಮತ್ತು ದೇವನ ಸಾಮೀಪ್ಯ ಗಳಿಸುವ ಮಾರ್ಗಗಳು ಕಂಡು ಬರುವುದಿಲ್ಲದಿರುವಾಗ ಅಲ್ಲಾಹನು ನನ್ನನ್ನು ತನ್ನ ಅನುಗ್ರಹದಿಂದ ನೇಮಿಸಿ ಈ ಜಮಾಅತನ್ನು ಸ್ಥಾಪಿಸಿದನು. ಅಲ್ಲಾಹನ ಬಗ್ಗೆ ನಿರ್ಲಕ್ಷ್ಯರಾಗಿರುವವರಿಗೆ ಅವನ ಬಗ್ಗೆ ತಿಳಿಸಿಕೊಡಲು, ಮಾತ್ರವಲ್ಲ ಸತ್ಯದಿಂದಲೂ ಸಹನೆಯಿಂದಲೂ ನಿಷ್ಠೆಯಿಂದಲೂ ನನ್ನ ಬಳಿಗೆ ಬರುವವರಿಗೆ ಅಲ್ಲಾಹನನ್ನು ತೋರಿಸಿ ಕೊಡಲು ನನ್ನನ್ನು ಕಳುಹಿಸಲಾಗಿದೆ. ಈ ಕಾರಣದಿಂದ ಅಲ್ಲಾಹನು ನನ್ನನ್ನು ಸಂಬೋಧಿಸಿ ಹೇಳಿದನು: **ಅಂತ ಮಿನ್ನೀ ವ ಅನ ಮಿನ್‌ಕ.**

ನಾನು ಪುನಃ ಹೇಳುತ್ತೇನೆ: ಇಸ್ಲಾಮಿನ ಮೂಲ ಬೇರು ತೌಹೀದ್ ಆಗಿದೆ. ಎಂದರೆ ಅಲ್ಲಾಹನ ಹೊರತು ಬೇರೆ ಯಾವ ವಸ್ತುವೂ ಮನುಷ್ಯನ ಒಳಗಿರಬಾರದು. ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ನಿಂದಿಸುವವರಾಗಬಾರದು. ಎಷ್ಟು ಕಷ್ಟ ಬಂದರೂ ಎಂತಹ ವಿಪತ್ತಿಗೆ ಗುರಿಯಾದರೂ ಅವನ ಬಾಯಿಯಿಂದ ಆಕ್ಷೇಪ ಕೇಳಿಸಬಾರದು. ಮನುಷ್ಯನಿಗೆ ಸಂಭವಿಸುವ ವಿಪತ್ತುಗಳು ಅವನ ಸ್ವಂತ ಕಾರಣಗಳಿಂದಲೇ ಬರುತ್ತವೆ. ಅಲ್ಲಾಹನು ಯಾರ ಮೇಲೆಯೂ ದೌರ್ಜನ್ಯ ಮಾಡುವುದಿಲ್ಲ. ಕೆಲವು ಸಾರಿ ಸತ್ಯವಂತರ ಮೇಲೆಯೂ ವಿಪತ್ತು ಬಂದೆರಗುವುದಿದೆ. ಆದರೆ ಅದನ್ನು ವಿಪತ್ತೆಂದು ಅನ್ಯರು ಭಾವಿಸುತ್ತಾರೆ. ವಾಸ್ತವದಲ್ಲಿ ಅದು ವಿಪತ್ತಾಗಿರುವುದಿಲ್ಲ. ಅದು ಬಹುಮಾನದ ಪ್ರಕಟಣೆಯಾಗಿರುತ್ತದೆ. ಅದರ ಮೂಲಕ ಅವರಿಗೆ ಅಲ್ಲಾಹನ ಸಾಮೀಪ್ಯ ವರ್ಧಿಸುತ್ತದೆ ಮತ್ತು ಅವರ ಆಧ್ಯಾತ್ಮಿಕ ಪದವಿ ಉನ್ನತಗೊಳ್ಳುತ್ತದೆ. ಅದನ್ನು ಅನ್ಯರು ಮನವರಿಕೆ ಮಾಡಿಕೊಳ್ಳಲಾರರು. ಆದರೆ ಯಾರು ಅಲ್ಲಾಹನ ಜೊತೆ ಸಂಬಂಧ ಹೊಂದಿಲ್ಲವೋ ಅವರಿಗೆ ಅವರ ಕೆಟ್ಟ ಕೆಲಸಗಳ ಕಾರಣ ಯಾವುದಾದರೂ ವಿಪತ್ತು ಬಂದೆರಗಿದರೆ ಅವರು ಇನ್ನಷ್ಟು ಮಾರ್ಗಭ್ರಷ್ಟರಾಗುತ್ತಾರೆ. ಇಂತಹ ಜನರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು:

**ಫೀ ಖುಲೂಬಿಹಿಮ್ ಮರಝುನ್ ಫಝಾದಹುಮುಲ್ಲಾಹು ಮರಝುನ್**

ಅವರ ಹೃದಯಗಳಲ್ಲಿ ರೋಗವಿದೆ. ಅಲ್ಲಾಹನು ಅವರ ರೋಗವನ್ನು ವರ್ಧಿಸಿದನು.

ಆದುದರಿಂದ ನೀವು ಯಾವಾಗಲೂ ಅಲ್ಲಾಹನಿಗೆ ಭಯಪಡುತ್ತಾ ಇರಬೇಕು. ನೀವು ಅಲ್ಲಾಹನ ಅನುಗ್ರಹಗಳನ್ನು ಬೇಡಿಕೊಳ್ಳಿರಿ. ಅಲ್ಲಾಹನೊಂದಿಗೆ ಸಂಬಂಧವನ್ನು ವಿಚ್ಛೇಧಿಸುವವರಾಗಬೇಡಿರಿ. ಯಾರು ಅಲ್ಲಾಹನ ಜಮಾಅತನ್ನು ಪ್ರವೇಶಿಸುತ್ತಾನೋ ಅವನು ಅಲ್ಲಾಹನಿಗೆ ಯಾವ ಉಪಕಾರವನ್ನೂ ಮಾಡುವುದಿಲ್ಲ. ಬದಲಾಗಿ, ಅವನಿಗೆ ಅಂತಹ ಭಾಗ್ಯ ನೀಡಿದುದು ಅಲ್ಲಾಹನ ಅನುಗ್ರಹವಾಗಿದೆ. ಒಂದು ಜನಾಂಗವನ್ನು ಸಂಪೂರ್ಣ ನಾಶಮಾಡಿ ಇನ್ನೊಂದನ್ನು ಸೃಷ್ಟಿಮಾಡಲು ಅಲ್ಲಾಹನಿಗೆ ಸಾಧ್ಯವಿದೆ. ಈ ಕಾಲಘಟ್ಟ ಪ್ರವಾದಿ ಲೂತ್ ಮತ್ತು ಪ್ರವಾದಿ ನೂಹರ ಕಾಲಘಟ್ಟಕ್ಕೆ ಸಮಾನವಾಗಿದೆ. ಅಲ್ಲಾಹನು ಯಾವುದಾದರೂ ಭಯಂಕರ ವಿಪತ್ತನ್ನು ಇಳಿಸಿ ಲೋಕವನ್ನು ನಾಶ ಮಾಡುವುದಕ್ಕೆ ಬದಲಾಗಿ ಅನುಗ್ರಹ ಮತ್ತು ದಯೆದೋರಿ ಲೋಕದ ಸುಧಾರಣೆಯನ್ನು ಇಚ್ಛಿಸಿ ಈ ಜಮಾಅತನ್ನು ಸ್ಥಾಪಿಸಿರುವನು"

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉಪದೇಶಗಳನ್ನು ಮನವರಿಕೆ ಮಾಡಿಕೊಳ್ಳಬೇಕಾದ ಬಹಳ ದೊಡ್ಡ ಜವಾಬ್ದಾರಿ ನಮಗಿದೆ. ನಾವು ತೌಹೀದಿನ ವಾಸ್ತವಿಕತೆಯನ್ನು ತಿಳಿಯಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಮ್ಮ ಜಮಾಅತ್‌ಗೆ ಅತ್ಯಂತ ಆವಶ್ಯಕವಾದುದು ನಮ್ಮೊಳಗೆ ಪರಿಶುದ್ಧ ಪರಿವರ್ತನೆ ಉಂಟುಮಾಡುವುದಾಗಿದೆ. ಯಾಕೆಂದರೆ ಅಂತಹವರಿಗೆ ತಾಜಾ ಜ್ಞಾನ ಲಭಿಸುತ್ತದೆ. ನಾವು ಜ್ಞಾನದ ಬಗ್ಗೆ ಹೇಳಿಕೊಂಡು ಅದರ ಪ್ರಕಾರ ವರ್ತಿಸದೆ ಇದ್ದರೆ ಅದು ಕೇವಲ ಹರಟೆ ಮಾತಾಗುತ್ತದೆ. ನಮ್ಮ ಜಮಾಅತಿನವರನ್ನು ಅನ್ಯರ ಸೋಮಾರಿತನ ನಿರ್ಲಕ್ಷ್ಯರನ್ನಾಗಿ ಮಾಡದಿರಲಿ (ಅನ್ಯರನ್ನು ಅನುಕರಿಸಿ ವರ್ತಿಸಬೇಡಿರಿ). ಸೋಮಾರಿತನ ಪ್ರಕಟಿಸುವ ಧೈರ್ಯ ನಮ್ಮವರು ತೋರಿಸದಿರಲಿ. ಅನ್ಯರಿಗೆ ದೇವನ ಬಗ್ಗೆ ಪ್ರೀತಿ ಇಲ್ಲದಿರುವುದನ್ನು ನೋಡಿ ನೀವು ಸಹ ದೇವನ ಬಗ್ಗೆ ಪ್ರೀತಿ ರಹಿತರಾಗಬೇಡಿರಿ."

ಮನುಷ್ಯನು ಬಹಳ ಆಕಾಂಶಗಳನ್ನು ಹೊಂದಿರುತ್ತಾನೆ. ಆದರೆ ಅಲ್ಲಾಹನ ಅದೃಶ್ಯ ವಿಧಿನಿರ್ಣಯಗಳ ಬಗ್ಗೆ ಯಾರಿಗೆ ತಾನೆ ತಿಳಿದಿದೆ? ಜೀವನವು ನಮ್ಮ ಆಶೆಗಳ ಪ್ರಕಾರ ನಡೆಯುವುದಿಲ್ಲ. ಆಶಾಭಿಲಾಷೆಗಳ ಶೃಂಖಲೆ ಬೇರೆಯೇ ಆಗಿದೆ. ಅಲ್ಲಾಹನ ವಿಧಿ ನಿರ್ಣಯಗಳ ಶೃಂಖಲೆ ಬೇರೆಯೇ ಆಗಿದೆ. ಅಲ್ಲಾಹನ ವಿಧಿ ನಿರ್ಣಯಗಳ ಶೃಂಖಲೆಯೇ ಸತ್ಯವಾಗಿ ಈಡೇರುವುದಾಗಿದೆ. ಮನುಷ್ಯನ ಜೀವನ ಚರಿತ್ರೆ ಅಲ್ಲಾಹನ ಬಳಿ ಇರುವುದು ಸತ್ಯವಾಗಿದೆ. ಅದರಲ್ಲಿ ಏನೆಲ್ಲಾ ಬರೆದಿದೆ ಎಂದು ಮನುಷ್ಯನಿಗೆ ಹೇಗೆ ತಾನೆ ತಿಳಿಯುವುದು? ಆದುದರಿಂದ ಹೃತ್ಪೂರ್ವಕವಾಗಿ ಪ್ರಜ್ಞೆಯಿಂದ ಚಿಂತಿಸಬೇಕಾಗಿದೆ.

ಯಾವಾಗಲೂ ನಿಮ್ಮ ಕೆಲಸಗಳನ್ನು ಪರಿಶೀಲಿಸುತ್ತಾ ಇರಿ. ಅಲ್ಲಾಹನು ನಮಗೆ ವಾಸ್ತವಿಕ **ತೌಹೀದಿನ** ಜ್ಞಾನ ದಯಪಾಲಿಸಲಿ. ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನಿಸುವುದಾಗಿರಲಿ – **ಆಮೀನ್**.

---------------*****---------------

*Friday Sermon delivered by Hadrath Khaleefathul Masih Al Khamis (atba)*
*at Masjid Baithul Futhuh, London on 16-05-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

*Published By: **Kannada Khutuba Desk*** (comes under **Kannada Isha'at Team**)
*Ahmadiyya Muslim Jama`at, Karnataka*

*Email*: **khutuba.kannada@gmail.com**